ತೆಂಗಿನಗುಂಡಿ:

ಅಳಿವೆಕೋಡಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಮೀನುಗಾರಿಕೆ ಇಳದಾಣ ಕೇಂದ್ರ ನಿರ್ಮಾಣವನ್ನು ರೂ. 89.53 ಲಕ್ಷದಲ್ಲಿ ನಿರ್ಮಿಸಲು ಮಂಜೂರಾತಿಯಾಗಿದ್ದು, ರೂ. 202.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ 18.3.2001ರಲ್ಲಿ ಅನುಮೋದನೆಗೆ ಕಳುಹಿಸಲಾಗಿದೆ. ಭಾರತ ಸರ್ಕಾರದಿಂದ ಅನುಮೋದನೆ ಸ್ವೀಕೃತವಾಗಿರುವುದಿಲ್ಲ. ತದನಂತರ 2002–2003ನೇ ಸಾಲಿನ ಎಸ್.ಆರ್. ದರದ ಪ್ರಕಾರ ರೂ. 225.00 ಲಕ್ಷಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ದಿನಾಂಕ 17.6.2003ರಲ್ಲಿ ಭಾರತ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಗಳಲ್ಲಿ ಅಳಿವೆಕೋಡಿ ಅಭಿವೃದ್ಧಿ ಕಾಮಗಾರಿಗಳು ಒಳಗೊಂಡಿದ್ದು, ಭಾರತ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಇದು ಪೂರ್ಣಗೊಂಡ ನಂತರ ತೆಂಗಿನ ಗುಂಡಿಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು.

ಹೊನ್ನಾವರ:

ಹೊನ್ನಾವರ 2ನೇ ಹಂತದ ಮೀನುಗಾರಿಕೆ ಬಂದರು ನಿರ್ಮಿಸುವ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಭಾರತ ಸರ್ಕಾರವು ಕೇಂದ್ರದ ಮೀನುಗಾರಿಕೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೇಂದ್ರೀಯ ಅಧ್ಯಯನ ತಂಡವನ್ನು ರಚಿಸಿದ್ದು, ಸದರಿ ತಂಡವು ದಿನಾಂಕ: 10.6.2003ರಂದು ಸ್ಥಳಕ್ಕೆ ಭೇಟಿ ನೀಡಿರುತ್ತದೆ. ಈ ತಂಡವು ಅಧ್ಯಯನ ವರದಿಯನ್ನು ಸಲ್ಲಿಸಬೇಕಾಗಿದ್ದು, ಭಾರತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಪ್ರಸ್ತಾವನೆಯಲ್ಲಿ ಹೂಳೆತ್ತುವಿಕೆ ಹಾಗೂ ಬ್ರೇಕ್‌ವಾಟರ್ ನಿರ್ಮಾಣ ಅಂಶಗಳು ಒಳಗೊಂಡಿರುತ್ತವೆ.

ಆ) ಬಂದಿದೆ.

ಇ) ಈಗಾಗಲೇ ಸಲ್ಲಿಸಲಾಗಿರುವ ಯೋಜನೆಗಳಿಗೆ ತ್ವರಿತವಾಗಿ ಮಂಜೂರಾತಿ ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ. ಅನುಮೋದನೆ ದೊರಕಿದ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು.

ರಾಜ್ಯದ ಹಲವು ಜಾತಿ ಕೋಮಿನವರನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ ಮಾಡುವುದು

3112 (3864) : ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಹಲವು ಜಾತಿ, ಕೋಮಿನವರು ಪರಿಶಿಷ್ಟ ಜಾತಿ / ವರ್ಗಕ್ಕೆ ಸೇರಿಸಿ ಕೊಳ್ಳಲು ರಾಜ್ಯ ಸರ್ಕಾರಕ್ಕೆ ಮನವಿಗಳು ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಸದರಿ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿಸಿಕೊಳ್ಳುವ ಪರಿಷ್ಕೃತ ಮಾರ್ಪಾಡುಗಳೇನಾದರೂ ಇದ್ದರೆ ವಿವರ ನೀಡುವುದು?

ಇ) ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಎ.ಬಿ.ಸಿ.ಡಿ ವರ್ಗೀಕರಣಕ್ಕೆ ಮಾರ್ಪಾಡು ಮಾಡಲು ಸರ್ಕಾರಕ್ಕೆ ಮನವಿಗಳು ಬಂದಿದೆಯೆ?

ಈ) ಬಂದಿದ್ದರೆ, ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಆ) ಕಾಲಕಾಲಕ್ಕೆ ಇಂತಹ ಬೇಡಿಕೆಗಳನ್ನು ಸರ್ಕಾರವು ಸ್ವೀಕರಿಸುತ್ತಿದೆ. ಇಂತಹ ಬೇಡಿಕೆಗಳನ್ನು ಸರ್ಕಾರವು ವಿಧಿವಿಧಾನಗಳಿಂದ ಪರಿಶೀಲಿಸುತ್ತಿದೆ.

ಆ) ಇ) ಪರಿಶಿಷ್ಟ ಜಾತಿಗಳಿಗೆ ಒದಗಿಸಲಾದ ಮೀಸಲಾತಿಗಳನ್ನು ಪರಿಶಿಷ್ಟ ಜಾತಿಯ ಉಪಜಾತಿಗಳಿಗೆ ಒಳಮೀಸಲಾತಿಗಳನ್ನು ನಿರ್ಧರಿಸುವ ಹಾಗೂ ಶಿಫಾರಸ್ಸು ಮಾಡುವ ಅವಕಾಶವು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕಾಯ್ದೆಯಡಿಯಲ್ಲಿ ಅವಕಾಶವಿರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಸೀದಿಗಳ ಅಭಿವೃದ್ಧಿ

3113 (3466) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 2 ವರ್ಷಗಳ ಅವಧಿಗಳಲ್ಲಿ ಮಸೀದಿಗಳ ಅಭಿವೃದ್ಧಿಗೆ, ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಹಣವೆಷ್ಟು; ತಾಲ್ಲೂಕು ಹಾಗೂ ಮಸೀದಿವಾರು ವಿವರ ನೀಡುವುದು?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ ಸಚಿವರು):

ಅ) ಚಿಕ್ಕಮಗಳೂರು ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನ ವಿವರ ಈ ಕೆಳಕಂಡಂತಿದೆ.

2001–2002	ರೂ. 9,70,000–00
2002–2003	ರೂ. 6,75,000–00
ಒಟ್ಟು	**ರೂ. 16,45,000–00**

ತಾಲ್ಲೂಕುವಾರು ಮತ್ತು ಮಸೀದಿವಾರು ವಿವರ ಪಟ್ಟಿ ಲಗತ್ತಿಸಲಾಗಿದೆ.

Annexure to Unstarred L.A. Question No. 3466 tabled by Sri B.R. Neelakanthappa, MLA

Year				
	I,	**Tarikere taluk**		
2001-2002	1.	Madina Masjid Station, Duglapura, Tarikere Taluk	25,000/-	Construction of Mosque
	2.	Jamia Masjid and Arabic Madrass Bavikere, Tarikere Taluk	25,000/-	
	3	Jamiya Mosque Channapura, Tarikere Taluk	25,000/-	
	4	Arabic School Rangenahalli Tarikere.	25,000/-	